ಕೊಟ್ಟಿದ್ದರು. ನಂತರ ಆಸ್ತಿಯ ಶೇಕಡಾ ಹದಿನೈದರಷ್ಟು ಭಾಗ ನಮಗೆ ಕೊಡುವುದೆಂದು ಮಾತಾಗಿತ್ತು. ಎಲ್ಲಾ ಸರಿಯಾಗಿತ್ತು ಸರ್. ಆದರೆ ಈ ಹಾಲಿನವನ ಬಗ್ಗೆ ಮರೆತಿದ್ದೆವು'' ಸುನೀಲ್ ಭಾರವಾದ ಧ್ವನಿಯಲ್ಲಿ ನುಡಿದ.

"ನನಗೆ ಇಲ್ಲಿ ನಿಮ್ಮನ್ನೆಲ್ಲಾ ನೋಡಿದಾಗಲೇ ಸಣ್ಣ ಅನುಮಾನ ಬಂದಿತ್ತು. ಅದೇನೋ ಹೇಳ್ತಾರಲ್ಲ ಆರನೇ ಇಂದ್ರಿಯ ಅಂತ, ಅದು. ಅಲ್ಲದೇ ನನ್ನ ನಡೆ, ನುಡಿ, ವಯಸ್ಸು, ನಿಮ್ಮನ್ನು ನಾನು ಈ ಕೇಸ್‌ನಲ್ಲಿ ಅಷ್ಟೊಂದು ಆಸಕ್ತಿ ಇಲ್ಲ ಎಂಬುದನ್ನು ತೋರಿಸಿತು. ಅದೇ ನನ್ನ ಪ್ಲಸ್ ಪಾಯಿಂಟ್. ಮೊದಲನೇ ಅನುಮಾನ ಬಂದಿದ್ದು ಈ ಲಾಯರ್ ಬಂದಾಗ. ನಂತರ ಆ ಹಾಲಿನ ನಾಗೇಶ ಎರಡನೇಯ ಕೂಗನ್ನು ಕೇಳಿದ್ದಾಗಿ ಹೇಳಿದಾಗ. ಇದೇನೋ ಎಲ್ಲಾ ಸೇರಿ ನಡೆಸುತ್ತಿರುವ ಆಟ ಎಲ್ಲ ಸೇರಿ ಒಂದೇ ಸುಳ್ಳನ್ನು ಹೇಳುತ್ತಿದ್ದಾರೆ ಅನ್ನಿಸತೊಡಗಿತು. ಗಾಯದಿಂದ ಹೊರಬಿದ್ದ ಗುಂಡು ಸಿಗದಿರುವುದು, ಕೊಲೆ ನೋಡಿದ ಅರ್ಧ ಗಂಟೆಯ ನಂತರ ನಮಗೆ ಹೇಳಿದ್ದು, ಇಡೀ ರೂಂನಲ್ಲಿ ಯಾವುದೇ ಬೆರಳಚ್ಚು ಇಲ್ಲದ್ದು ಅನುಮಾನಕ್ಕೆ ಎಡೆಮಾಡಿತು. ಅದೇ ಜಾಡು ಹಿಡಿದು ನಿಧಾನವಾಗಿ ನಿಮ್ಮಿಂದಲೇ ಒಂದೊಂದು ವಿಚಾರ ನಿಮಗೇ ಗೊತ್ತಿಲ್ಲದಂತೆ ಬಾಯಿ ಬಿಡಿಸಿದೆ. ನಿಮ್ಮ ಪ್ಲಾನ್ ಏನೋ ಸರಿಯಾಗಿ ಇತ್ತು. ಎಲ್ಲರ ಮೇಲೂ ಅನುಮಾನ ಬರುವ ಹಾಗೆ ಮಾಡಿ ನಂತರ ಈ ವಿಶಾಲಾಕ್ಷಮ್ಮನ ಆಸ್ತಿ ವಿಚಾರ ಈ ಲಾಯರ್‌ನಿಂದ ಹೇಳಿಸಿ ಆಮೇಲೆ ಸುನೀಲ್ ಈ ವಿಶಾಲಾಕ್ಷಮ್ಮನ ಮಗ ಎಂದು ನಮಗೆ ತಿಳಿಯುವಂತೆ ಮಾಡಿ ಅವನೇ ಕೊಲೆ ಮಾಡಿದ್ದಾನೆಂದು ನಾವು ಅರೆಸ್ಟ್ ಮಾಡಿದರೆ ಅದನ್ನು ಕೋರ್ಟ್‌ನಲ್ಲಿ ಸಾಕ್ಷ್ಯಾಧಾರದ ಕೊರತೆಯಿಂದ ಖುಲಾಸೆ ಮಾಡಿಸಿ, ಎಲ್ಲರೂ ಸೇರಿಕೊಂಡು ಆಸ್ತಿ ಹೊಡೆಯುವ ನಿಮ್ಮ ಪ್ಲಾನ್ ಸರಿಯಾಗಿಯೇ ಇತ್ತು. ನೀವೇ ನಮ್ಮನ್ನು ಕೊಲೆಗಾರನೆಡೆಗೆ ಲೀಡ್ ಮಾಡಬೇಕು ಎನ್ನುವ ನಿಮ್ಮ ಮಾಸ್ಟರ್ ಪ್ಲಾನ್ ನಿಮ್ಮ ಹಾಲಿನವ ಕೇಳಿದ ಆ ಎರಡು ಕೂಗುಗಳು ತಲೆಕೆಳಗಾಗುವಂತೆ ಮಾಡಿದವು" ಎಂದ. ನಾಗರಾಜಯ್ಯನ ಮಾತುಗಳು ಒಬ್ಬೊಬ್ಬರನ್ನೂ ಈಟಿಯಂತೆ ಚುಚ್ಚುತ್ತಿದ್ದವು. ಅಲ್ಲಿದ್ದ ಪೊಲೀಸರಾದಿಯಾಗಿ ಎಲ್ಲರೂ ಸುಮ್ಮನಾಗಿಬಿಟ್ಟಿದ್ದರು.

"ಸೋ ಮೋಟಿವ್ ಸಿಕ್ಕಿತು. ಕೊಲೆಗಾರ ಸಿಕ್ಕಿದ್ದಾನೆ. ಪ್ಲಾನ್ ಮಾಡಿದವರು ಸಿಕ್ಕಿದ್ದಾರೆ. ಸಾಂದರ್ಭಿಕ ಸಾಕ್ಷಿ ಸಿಕ್ಕಿದೆ. ಈಗ ಮರ್ಡರ್ ವೆಪನ್ ಸಿಕ್ಕರೆ ಕೇಸ್ ಕ್ಲೋಸ್!'' ಎಂದ ನಾಗರಾಜಯ್ಯ ಗಹಿಗಹಿಸಿ ನಕ್ಕ. ಅವನ ನಗುವಿನಲ್ಲಿ ಅದೇನೋ ಅಹಂಕಾರ ಅಡಗಿತ್ತು.

"ಆಲ್ ಆರ್ ಅಂಡರ್ ಅರೆಸ್ಟ್."

---

**ವಾಸುದೇವ ಮೂರ್ತಿ ಪಿ.**

ಹುಟ್ಟಿದ ಊರು ಶಿವಮೊಗ್ಗ. ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ವೃತ್ತಿ. ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೇದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೇದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿಕೊಂಡಿದೆ.